


'ನೀನು ಹೀಗೆ ಅರ್ಜೆಂಟಲ್ಲಿ ಹೇಳಿದ್ರೆ ಹೇಗೆ? ಅದೂ ದುರ್ಗಾ ನಮಸ್ಕಾರ. ಒಟ್ರಾಶಿ ಎಲ್ಲ ಮಾಡ್ಲಿಕ್ಕೆ ಆಗೂದಿಲ್ಲ' ಅಂದರು. ಅವಳು ತಾನು ಯಾಕೆ ಹರಕೆ ಹೇಳಿಕೊಂಡಿದ್ದೆ ಅನ್ನೂದನ್ನು ಹೇಳಿದಳು. ಭಟ್ರಿಗೆ ಅವಳ ಕತೆ ಗೊತ್ತಿತ್ತು. ಪಾಪ ಅನಿಸಿತು. ಅವಳ ಹಾಗೂ ಮಗನ ನಕ್ಷತ್ರ ಕೇಳಿದರು. ಕಡೆಗೆ, 'ಆಯಿತು ನಿನ್ನ ನಕ್ಷತ್ರಕ್ಕೆ ಆದರೆ ವಧೆ ತಾರೆ ಆಗ್ತದೆ ಆಗೂದಿಲ್ಲ. ಮಗನ ನಕ್ಷತ್ರಕ್ಕೆ ಆದರೆ ಕ್ಷೇಮ ತಾರೆ. ಪೂಜೆಗೆ ಅವನೇ ಕೂತ್ಕೊಳ್ಳಿ. ಐದು ಗಂಟೆಯ ಒಳಗೆ ಬರ್ತೇನೆ. ಒಂದಿಷ್ಟು ಹೂ ಬೇಕು. ವಿಶೇಷವಾಗಿ ಕೇಪಳ ಹೂ ತುಂಬ ಬೇಕು. ಎಷ್ಟು ಸಾಧ್ಯವೋ ಅಷ್ಟು ಸಂಜೆಯ ಒಳಗೆ ಒಟ್ಟು ಮಾಡಿಡು' ಅಂದರು.

ವಸಂತಿ ಪಕ್ಕ ಪಕ್ಕ ಕೆಲಸ ಎಲ್ಲ ಮಾಡಿದಳು. ಸಂಜೆಯ ದುರ್ಗಾನಮಸ್ಕಾರಕ್ಕೆ ಹೂ ತಂದ ಹಾಗೂ ಆಯಿತು, ನಾರಾಯಣನನ್ನು ಕಂಡು ಮಾತಾಡಿಸಿದ ಹಾಗೂ ಆಯಿತು ಅಂತ ಪೇಟೆಗೆ ಹೋದಳು. ಅಲ್ಲಿ ಶಾಲೆಯ ಮೈದಾನಕ್ಕೆ ಹೋದರೆ, ಆಟ ನಡೆಯುವ ತಯಾರು ಮಾಡುವವರು ಕಂಬ ಊರ್ತಾ, ಟೆಂಟು ಹಾಕ್ತಾ ಇದ್ದರು. ಕಲಾವಿದರೆಲ್ಲ ಎಲ್ಲಿ ಇದ್ದಾರೆ ಅಂತ ಕೇಳಿದಾಗ ದೇವಸ್ಥಾನದಲ್ಲಿ ಕ್ಯಾಂಪ್ ಹಾಕಿದ್ದಾರೆ ಅಂತ ಗೊತ್ತಾಯಿತು. ಅಲ್ಲಿಗೆ ಓಡಿದಳು. ನಾರಾಯಣನನ್ನು ಹುಡುಕಿದಳು. ಅವ ಒಂದು ಕಂಬಕ್ಕೆ ಒರಗಿ ತೂಕಡಿಸ್ತಾ ಇದ್ದ. ನೋಡಿದರೆ, ಭಾರೀ ಬಚ್ಚಿದ್ದಾನೆ. ಮೈ ಅಲುಗಾಡಿಸಿ ಎಬ್ಬಿಸಿದಳು. 'ಏಯ್' ಅಂತ ಮುಖ ಸಿಂಡರಿಸಿ ಗೊಣಗಿದ ಅತೃಪ್ತಿಯಿಂದ. ಒಂದು ಕ್ಷಣ ಕಣ್ಣು ಬಿಟ್ಟ. ಸರೀ ನೋಡಿದ, ಅಡ್ಡ ಮುಖ ಹಾಕಿದ. 'ಇಲ್ಲಿಗೆಲ್ಲ ಯೆಂತಕ್ಕೆ ಬರ್ಲಿಕ್ಕೆ ಹೋದದ್ದು? ನಿಂಗೆ ಸ್ವಯ ಇಲ್ವಾ?' ಅಂತ ಒರಟಾಗಿ ಹೇಳಿದ. 'ಎರಡು ವರ್ಷಗಳ ಮೇಲೆ ಆಯಿತು ನನ್ನ ಹತ್ರ ಮಾತಾಡದೆ. ಒಮ್ಮೆ ಸಾ ನಿಮಿಗೆ ನನ್ನ ನೆನಪೇ ಆಗ್ಲಿಲ್ವಾ? ಇಷ್ಟು ದಿವಸ ಮಗನಿಗೆ ಅಪ್ಪನನ್ನು ತೋರಿಸದೇ ಮಂಗ ಮಾಡ್ತಾ ಭಂಡ ಬಾಳು ಬಾಳಿದೆ. ಇನ್ನೂ ಹಾಗೇ ಮಾಡಬೇಕಾ ನಾನು? ಹೇಗೂ ಇಲ್ಲೀತಂಕ ಬಂದಿದ್ದೀರಿ. ಸಂಜೆ ಒಮ್ಮೆ ಮನೆಗೆ ಬನ್ನಿ ದಮ್ಮಯ್ಯ. ತಂದೆ ಮಗ ಒಂದಾದರೆ ಮನೆಯಲ್ಲಿ ದುರ್ಗಾ ನಮಸ್ಕಾರ ಮಾಡಿಸ್ತೇನೆ ಅಂತ ಹರಕೆ ಹೊತ್ತಿದ್ದೆ. ಇವತ್ತು ಭಟ್ರಿಗೆ ಹೇಳಿದ್ದೇನೆ. ಮಗ ಕಾಲೇಜಿಗೆ ಹೋಗಿದ್ದಾನೆ. ಸಂಜೆ ಬರ್ತಾನೆ. ಒಮ್ಮೆ ಕಂಡು ಮಾತಾಡಿಸಿ. ಇಲ್ಲ ಅಂತ ಹೇಳಬೇಡಿ' — ಕಣ್ಣಲ್ಲಿ ನೀರು ತುಂಬಿಕೊಂಡು ಹೇಳಿದಳು. ಅವ ಒಂದು ಕ್ಷಣ ಯೋಚಿಸಿದ. ಕಡೆಗೆ, 'ಆಯ್ತು ಸಂಜೆ ಬರ್ತೇನೆ. ನಿನ್ನ ಮಗ ಅಪ್ಪ ಬಂದಿದ್ದಾನೆ ಅಂತ ಕಂಡಾಬಟ್ಟೆ ಮೋಕೆ ಮಾಡುದಾ ಅಥವಾ ಇಷ್ಟು ವರ್ಷ ಎಲ್ಲಿದ್ದಿಯಾ ಅಂತೆಲ್ಲ ಉಡಾಫೆ ಮಾಡುದಾ ಎಲ್ಲ ಮಾಡ್ಬಾರ್ದು. ಹಾಗೆ ಮಿನಿ ಮಾಡಿದ್ರೆ ನಾನು ಎಂತ ಮಾಡ್ತೇನೆ ಅಂತ ನಂಗೆ ಗೊತ್ತಿಲ್ಲ!' ಅಂದ. 'ಹಾಗೆ ಎಂಥದು ಸಾ ಆಗೂದಿಲ್ಲ. ಭಟ್ರು ಬರ್ತಾರೆ. ಪೂಜೆ ಆಗ್ತದೆ. ಮಗನ ಹತ್ರ ಇಷ್ಟ ಇದ್ರೆ ಮಾತಾಡಿ. ಇಲ್ಲಾಂತಾದ್ರೆ ಪ್ರಸಾದ ತಕ್ಕೊಂಡು ಹೋಗಿ' ಅಂದಳು. ಅವ ಒಪ್ಪಿದ. ಸ್ವಲ್ಪ ಹೊತ್ತಿನ ನಂತರ ಅದೂ ಇದೂ ಮಾತಾಡುತ್ತ 'ಬೊಂಬಾಯಿಯಿಂದ ಊರಿಗೆ ವಾಪಾಸ್ ಯಾವಾಗ ಬಂದದ್ದು?' ಅಂತ ಕೇಳಿದಳು. ಬೊಂಬಾಯಿಯ ಥಳಕು ಬಳಕಿಗೆ ಮರುಳಾಗಿ ತನ್ನ ಹೆಂಡತಿ ಮಕ್ಕಳು ಎಲ್ಲ ತನ್ನನ್ನು ಬಿಟ್ಟು ಹೋದದ್ದರ ಬಗ್ಗೆ, ಕೊರೊನಾದಿಂದ ಉಂಟಾದ ಲಾಕ್‌ಡೌನ್‌ನಿಂದಾಗಿ ತಾನು ಕೆಲಸ ಮಾಡ್ತಿದ್ದ ಹೋಟೆಲ್ ಬಂದಾದದ್ದರ ಬಗ್ಗೆ ಹೇಳಿದ. ಕಡೆಗೆ ಒಂದು ನಿಟ್ಟುಸಿರುಬಿಟ್ಟ. ಸಂಜೆ ಅವ ಬರೂದನ್ನು ಮತ್ತೊಮ್ಮೆ ಖಾತ್ರಿ ಮಾಡಿಕೊಂಡು ಅವಳು ಅಲ್ಲಿಂದ ಪೇಟೆಗೆ ಹೋದಳು. ಪೂಜೆಗೆ ಬೇಕಾಗಿದ್ದ ಹೂಗಳನ್ನು ತಕೊಂಡಳು. ಆದರೆ ಕೇಪಳವೇ ಸಿಗಲಿಲ್ಲ. ದಾರಿಯಲ್ಲಿ ಬರ್ತಾ ಇದ್ದಾಗ ಪರಿಚಯದ ಶಕುಂತಳಕ್ಕ ಸಿಕ್ಕಿದ್ರು. ಅವರ ಹತ್ತಿರ, 'ಸಂಜೆ ದುರ್ಗಾ ನಮಸ್ಕಾರ ಪೂಜೆಗೆ ಕೇಪಳ ಸಿಗ್ಲಿಲ್ಲ. ನಿಂಗೆ ಎಲ್ಲಿಯಾದರೂ ಸಿಕ್ತದಾ? ತಿಳಿಸ್ತೀರಾ? ನಂಗೆ ಬೇಕೇ ಬೇಕು' ಅಂದಳು. 'ಹತ್ತಿರದ ಮನೆಯವರ ಹತ್ರ ಇರ್ಬೇಕು. ಇದ್ರೆ ಫೋನ್ ಮಾಡ್ತೇನೆ. ಬಂದು ಪಕ್ಕ ತಕ್ಕೊಂಡು ಹೋಗಿ' ಅಂತ ಅವರು ಅಂದರು. ವಸಂತಿ ಮನೆಗೆ ಬಂದಳು.

ಸಂಜೆ ಆಯಿತು. ಪುರುಷೋತ್ತಮ ಭಟ್ರು ನಾಕು ಗಂಟೆಗೆ ಬಂದ್ರು. ಮಡಿ ಉಟ್ಟು ಮಂಡಲ ಹಾಕ್ಲಿಕ್ಕೆ ಸುರು ಮಾಡಿದ್ರು. ವಸಂತಿ ನಾರಾಯಣನ ದಾರಿ ನೋಡ್ತಾ ನಿಂತಲ್ಲಿ ನಿಲ್ಲದೆ ಆಚೆ ಈಚೆ ಓಡಾಡ್ತಾ ಇದ್ದಳು. ಅಷ್ಟು ಹೊತ್ತಿಗೆ ದಢಾರಂತ ಬಾಗಿಲನ್ನು ದೂಡಿಕೊಂಡು ನಾರಾಯಣ ಬಂದ. ಮೈ ಆಚೆ ಈಚೆ ಮಾಲ್ತಾ ಇದ್ದು. ಡಿಂಗ್ ಆಗಿದ್ದಾನೆ ಅಂತ ಅವನ ಬಾಯಿಯಿಂದ ಬರ್ತಾ ಇದ್ದ ವಾಸನೆಯಿಂದ ಗೊತ್ತಾಯಿತು. ಭಟ್ರು ಒಮ್ಮೆ ಗಾಬರಿಯಾದರು. 'ಇವರು...' ಅಂತ ವಸಂತಿ ತೊದಲಿದಳು. ಭಟ್ರು ಗೊತ್ತಾಯಿತು ಅಂತ ಸನ್ನೆ ಮಾಡಿದರು. ಅವನನ್ನು ನೋಡಿ ಹುಸಿ ನಗೆ ಆಡಿದರು. ಅವ ಸಿಟ್ಟಲ್ಲಿ ಮುಖ ತಿರುಗಿಸಿ ಎಂಥದಾ ಗೊಣ ಗೊಣ ಅಂತ ಹೇಳ್ತಾ ಕೂತಿದ್ದ. ಭಟ್ರ ಎದುರೇ ಬೀಡಿ ಹಚ್ಚಿ ಪುಸು ಪುಸು ಹೊಗೆ ಬಿಟ್ಟ. ಮಂಡಲ ಪೂರ ಹಾಕಿ ನಡುವೆ ಕಾಲು ದೀಪ ಇಟ್ಟ ಅವರಿಗೆ ಅವ ಬೀಡಿ ಎಳ್ದದ್ದು ನೋಡಿ ಒಂದು ನಮೂನಿ ಆಯ್ತು. 'ವಸಂತಿ ನಾನು ಕೆರೆಗೆ ಹೋಗಿ ಸ್ನಾನ ಮಾಡಿ ಸಂಧ್ಯಾವಂದನೆ ಮಾಡಿ ಬರ್ತೇನೆ. ಮಗ ಬಂದ್ರೆ ಸ್ನಾನ ಮಾಡಿ ಮಡಿಉಟ್ಟು ಸಿದ್ಧ ಆಗಿ ಇರ್ಲಿ. ಕೂಡಲೇ ಪೂಜೆ ಮಾಡುವ' ಅಂದವರೆ ಕೆರೆಯ ಕಡೆಗೆ ಹೋದ್ರು. ಅಷ್ಟು ಹೊತ್ತಿಗೆ ಶಕುಂತಳಕ್ಕ, 'ಕೇಪಳ ಹೂ ಉಂಟಂತೆ ಹತ್ತಿರದ ಮನೆಯವರು ಕೊಯ್ದು ಇಟ್ಟಿದ್ದಾರಂತೆ. ಬಂದು ತಕ್ಕೊಂಡು ಹೋಗ್ತೀರಾ?' ಅಂತ ಫೋನ್ ಮಾಡಿದರು. ಖುಷಿಯಾಗಿ ವಸಂತಿ ನಾರಾಯಣನ ಹತ್ತಿರ ಹೇಳಿ ಹೋದಳು.

ದಾರಿಯಲ್ಲಿ ಕಾಲೇಜು ಮುಗಿಸಿ ಬರ್ತಾ ಇದ್ದ ಮಗ ಎದುರಿಗೆ ಸಿಕ್ಕಿದ. 'ಮಗಾ... ನಿನ್ನ ಜನ್ಮ ಇವತ್ತು ಸಾರ್ಥಕ ಆಯಿತು. ಅಪ್ಪ ಬಂದಿದ್ದಾರೆ ಮನೆಗೆ' ಅಂದಳು. ಅವ ಒಮ್ಮೆ ಗಾಬರಿಯಾದ. ನಡೆದ ಕತೆ ಎಲ್ಲ ತರಾತುರಿಯಲ್ಲಿ ಹೇಳಿದಳು. 'ನೀನು ಹೋಗಿ ಮಾತಾಡಿಸು. ಸ್ನಾನ ಮಾಡಿ ರೆಡಿಯಾಗು. ನಾನು ಹೋಗಿ ಕೇಪಳ ಹೂ ತರ್ತೇನೆ' ಅಂತ ಹೇಳಿ ಬೀಸ ಬೀಸ ಹೋದಳು. ಮಗ ಅಪ್ಪನನ್ನು ನೋಡುವ ಅವಸರದಿಂದ ಮನೆಗೆ ಬಂದ.

ನಾರಾಯಣನನ್ನು ಕಂಡವನೇ, 'ಅಪ್ಪಾ...' ಅಂತ ಹೇಳಿ ಕಾಲಿಗೆ ಬಿದ್ದ. ನಾರಾಯಣ ಸರಕ್ಕನೇ ಕಾಲನ್ನು ಹಿಂದಕ್ಕೆ ತೆಕ್ಕೊಂಡ. 'ಯಾಕೆ ಅಪ್ಪಾ ನನ್ನ ಮೇಲೆ ಕೋಪವಾ? ಇಷ್ಟು ದಿವಸ ನಿನ್ನನ್ನು ಕಾಣಬೇಕು ಅಂತ ಎಷ್ಟು ಎಣಿಸ್ತಾ ಇದ್ದೆ ಗೊತ್ತುಂಟಾ?' ದೀನವಾಗಿ ಹೇಳಿದ. 'ಯಾರಾ?! ಯಾರಾ ಮಗಾ... ಹೋಗ ಹೋಗ, ನೀನು ನನ್ನ ಮಗನೂ ಅಲ್ಲ. ನಾನು ನಿನ್ನ ಅಪ್ಪನೂ ಅಲ್ಲ'. 'ಇಲ್ಲ ಅಪ್ಪ, ನಾನೇ ನಿನ್ನ ಮಗ. ಅಮ್ಮ ಈಗ ಹೇಳಿದ್ಲು. ನೀನೇ ಅಪ್ಪ ಅಂತ', 'ನೋಡು... ಇಂಥದ್ದೆಲ್ಲ ಮಾತಾಡಿ ನನ್ನನ್ನು ಮಂಗ ಮಾಡುದು ಬೇಡ. ನನ್ನ ಮಗ ಅಂತ ಆದ್ರೆ ಹೀಗೆ ಹೆಣ್ಣಿನ ಹಾಗೆ ಬಳುಕ್ತಾ ಇರ್ತಿರ್ಲಿಲ್ಲ ನೀನು. ನಾನು ಹೇಗೆ ಇದ್ದೇನೆ. ನೀನು ಹೇಗೆ ಇದ್ದೀ ನೋಡು. ಥತ್!', 'ಇಲ್ಲ ಅಪ್ಪಾ... ಅಮ್ಮ ಸುಳ್ಳು ಹೇಳೂದಿಲ್ಲ. ನಾನು ನಿನ್ನ ಮಗನೇ. ಬೇಕಾದ್ರೆ ಈಗ ಬರ್ತಾಳೆ. ಅವಳ ಹತ್ರವೇ ಕೇಳುವ', 'ಷ್ಯಕ್!... ಯಾವ ಹಡಬೆಗೆ ಹುಟ್ಟಿದ ರಂಡ್ಯಾಮಗನಾ ಏನ ನೀನು! ದರಿದ್ರ! ನನ್ನ ಮಗ ಅಂತ ಈಗ ವೇಷ ಮಾಡ್ತಾ ಇದ್ದಿ ಹಲ್ಕಟ್!'

ಮಗನಿಗೆ ಪಿಸುರು ಏರಿತು. 'ಏನು! ಏನು ಹೇಳಿದೆ ನೀನು? ನನ್ನನ್ನು ಬೇಕಾದ್ರೆ ಬಯ್ಯಿ. ಅಮ್ಮನನ್ನು ಬೈಬೇಡ' ಅಂತ ಬೊಬ್ಬೆ ಹೊಡೆದ. ನಾರಾಯಣ ಮಾಲ್ತಾ ಮಾಲ್ತಾ ಎದ್ದ. 'ಎಂತ ಎಂತ ಮಾಡ್ತೀಯಾ? ಹೇಳ್ತೇನೆ! ಹೇಳ್ತೇನೆ!... ನೀನು ರಂಡ್ಯಾ ಮಗನೇ ಹೌದು. ಎಂತ ಮಾಡ್ತೀಯಾ? ತಂಕ ಉಂಟನಾ ನಿಂಗೆ? ಎಂತ ಮಾಡ್ತೀಯಾ ಮಾಡ ಮಾಡ!' ಅಂತ ಮಗನ ಮೈಮೇಲೆ ಕೈ ಹಾಕ್ಲಿಕ್ಕೆ ಬಂದ.

ಮಗನಿಗೆ ಎಲ್ಲಿ ಇತ್ತಾ ಏನ ಗರ್ವ, ಮಂಡದ ನಡುವೆ ಇಟ್ಟಿದ್ದ ಕಾಲು ದೀಪವನ್ನು ಎತ್ತಿ ಅವನ ತಲೆಗೆ ಹೊಡೆದ. ನಾರಾಯಣನ ತಲೆ ಒಡೆದು ರಕ್ತ ಜಿಲ್ ಅಂತ ಹಾರಿತು. ಸಾಲದ್ದಕ್ಕೆ ಕಾಲು ದೀಪದ ತುದಿಯಿಂದ 'ಅಮ್ಮನನ್ನು ಬೈತೀಯಾ ಬೋಳಿಮಗನೇ' ಅಂತ ಹೇಳುತ್ತ ಎಟ್ಟುತ್ತ ಹೋದ. ರಕ್ತ ಧಾರೆ ಧಾರೆಯಾಗಿ ಮಂಡಲದ ತುಂಬ ಹರಿಯುವ ತನಕ ಬಿಡಲಿಲ್ಲ.

ಕೆರೆಯಲ್ಲಿ ಸ್ನಾನ, ಸಂಧ್ಯಾವಂದನೆ ಮುಗಿಸಿ ಬಂದ ಭಟ್ರು, ಕೈಯಲ್ಲಿ ಕೇಪಳ ಹೂ ಹಿಡ್ಕೊಂಡು ಬಂದ ವಸಂತಿ, ಆದ ಘಟನೆಯನ್ನು ಕಂಡು ನಡುಗುತ್ತ ನಿಂತಿದ್ದರು. ದೂರದಲ್ಲಿ ಅಂದಿನ ಆಟಕ್ಕೆ ಜನ ಸೇರಿಸುವುದಕ್ಕಾಗಿ ಚೆಂಡೆ ಮದ್ದಳೆ ಬಾರಿಸುವುದು ಕ್ಷೀಣವಾಗಿ ಕೇಳಿಸುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in